# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ವಾರ್ಡ್ 93, ವಸಂತನಗರ

### ವಾರ್ಡ್ ಸಮಿತಿ ಸಭೆಯ ನಡವಳಿಗಳು

ದಿನಾಂಕ: 17-07-2021 ರಂದು ಶನಿವಾರ ಬೆಳಿಗ್ಗೆ 11.00 ಗಂಟೆಗೆ, ವಾರ್ಡ್ ಕಛೇರಿಯಲ್ಲಿ ಶ್ರೀಮತಿ ಮಂಜುಳಮ್ಮ, ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ತಹಶಿಲ್ದಾರ್(ಚುನಾವಣೆ) ಬಿ.ಬಿ.ಎಂ.ಪಿ ರವರ ಅಧ್ಯಕ್ಷತೆಯಲ್ಲಿ ಸಮಿತಿ ಸಭೆಯನ್ನು ನಡೆಸಲಾದ ವಾರ್ಡ್ ಸಮಿತಿಯ ಸಭೆಯ ನಡವಳಿ:-

ಈ ಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರುಗಳ ವಿವರಗಳು

| | | |
|---|---|---|
| **ಸದಸ್ಯರುಗಳು** | | |
| 1 | ಶ್ರೀಮತಿ ಚಿತ್ರ ವೆಂಕಟೇಶ್ | ಸಮಿತಿ ಸದಸ್ಯರು |
| 2 | ಶ್ರೀಮತಿ ಪ್ರಿಯಾಚೆಟ್ಟಿ | ಸಮಿತಿ ಸದಸ್ಯರು |
| 3 | ಶ್ರೀ ರಾಜ್ ದುಗ್ಗಾರ್ | ಸಮಿತಿ ಸದಸ್ಯರು |
| 4 | ಶ್ರೀ ಲಕ್ಷ್ಮಣ್ | ಸಮಿತಿ ಸದಸ್ಯರು |
| 5 | ಶ್ರೀ ಮಾಧವನ್ | ಸಮಿತಿ ಸದಸ್ಯರು |
| | ಶ್ರೀ ಕುಮಾರ್ | |
| **ಅಧಿಕಾರಿಗಳು** | | |
| 1 | ಕುಮಾರಿ ರೇಣುಕಾಂಬ | ಹಿರಿಯ ಆರೋಗ್ಯಾಧಿಕಾರಿ (ಎಸ್.ಹೆಚ್.ಐ) |
| 2 | ಶ್ರೀ ಮನೋಜ್ | ಕಿರಿಯ ಆರೋಗ್ಯಾಧಿಕಾರಿ |
| 3 | ಶ್ರೀ ಮಹಮದ್ ಜಾವೇದ್ | ಸಹಾಯಕ ಕಾರ್ಯಪಾಲಕ ಅಭಿಯಂತರರು |
| 4 | ಶ್ರೀ ಮೂರ್ತಿ | ಕಂದಾಯ ವಸೂಲಿಗ್ಹರರು |
| | ಶ್ರೀ ಸೈಪುಲ್ಲಾ | ಸ್ಟ್ರೀಟ್ ಲೈಟ್ |
| | ಶ್ರೀಮತಿ ಮಂಜುಳ | ತೋಟಗಾರಿಕೆ ಇಲಾಖೆ |
| | ಶ್ರೀ ಜೈರಾಜ್ | ವರ್ಕ್ ಇನ್ಸ್‌ಪೆಕ್ಟರ್ |
| **ಗೈರುಹಾಜರಾದವರು** | | |
| 1 | ಶ್ರೀ ನವೀನ್ ಕುಮಾರ್ | MOH |
| 2 | ಶ್ರೀ ಶ್ರೀನಿವಾಸ್ | ಸಹಾಯಕ ಅಭಿಯಂತರರು ಮೇಜರ್ ರೋಡ್ |
| 3 | ಲಿಂಗಯ್ಯ ಕೆ.ಬಿ ಬಸವರಾಜ್ | ಸಹಾಯಕ ಕಂದಾಯ ಅಧಿಕಾರಿಗಳು |
| 4 | ಶ್ರೀ ತಿಮ್ಮೇಗೌಡ | ಜೂನಿಯರ್ ಇಂಜಿನಿಯರ್ ಬೆಸ್ಕಾಂ |
| 6 | ಡಾ॥ ಸಚ್ಯುದ್ | ಪಿ.ಹೆಚ್.ಎಸ್ (ಪ್ರಾಥಮಿಕ ಆರೋಗ್ಯ ಕೇಂದ್ರ) |
| 7 | ಶ್ರೀಮತಿ ಪುಷ್ಪ | ಕಂದಾಯ ನಿರೀಕ್ಷಕರು |
| 8 | | ಸಹಾಯಕ ಕಂದಾಯಾಧಿಕಾರಿ |
| 9 | | ತೋಟಗಾರಿಕೆ ಅಧೀಕ್ಷಕರು |
| 10 | | ಸ್ಥಳೀಯ ಪೊಲೀಸ್ ಠಾಣಾಧಿಕಾರಿಗಳು (ಹೈಗ್ರೌಂಡ್/ಶೇಷಾದ್ರಿ ಪುರಂ) ಪೊಲೀಸ್ ಠಾಣೆ |
| 11 | | ಸ್ಥಳೀಯ ಸಂಚಾರ ಪೊಲೀಸ್ ಅಧಿಕಾರಿಗಳೂ (ಹೈಗ್ರೌಂಡ್/ಶೇಷಾದ್ರಿ ಪುರಂ) ಪೊಲೀಸ್ ಠಾಣೆ |

| | | |
|---|---|---|
| 12 | | ವೈದ್ಯರು ಪ್ರಾಥಮಿಕ ಆರೋಗ್ಯ ಕೇಂದ್ರ ವಸಂತನಗರ |
| 13 | | ಸ್ಥಳೀಯ ಸಹಾಯಕ ಅಭಿಯಂತರರು, ಬೆಸ್ಕಾಂ |
| 14 | | ಸ್ಥಳೀಯ ಸಹಾಯಕ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮಂಡಳಿ |

ಸಭೆಯಲ್ಲಿ ನೋಡಲ್ ಅಧಿಕಾರಿಗಳಾದ ಶ್ರೀಮತಿ ಆರ್ ಮಂಜುಳಮ್ಮ ತಹಶೀಲ್ದಾರ್ (ಚುನಾವಣೆ) ರವರು ಎಲ್ಲರನ್ನು ಸ್ವಾಗತಿಸುತ್ತಾ, ಹಿಂದಿನ ಸಭೆಯ ಅನುಪಾಲನಾ ವರದಿಯನ್ನು ಸಭೆಗೆ ತಿಳಿಸಿದರು.

ರಾಜ್ ದುಗ್ಗಾರ್ ರವರು ಸಮಿತಿ ಸದಸ್ಯರು ಮಾತಾನಾಡುತ್ತಾ, ಸಾರ್ವಜನಿಕ ಶೌಚಾಲಯಗಳ ಸಮಸ್ಯಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಗತಿಯಾಗಿರುವುದಿಲ್ಲ ಹಾಗೂ ಸಿ.ಸಿ. ಕ್ಯಾಮರಾ ಬ್ಲಾಕ್ ಸ್ಪಾಟ್‌ಗಳಲ್ಲಿ ಅಳವಡಿಸಬೇಕೆಂದು ಕೋರಿದರು ಹಾಗೂ ಹಿಂದಿನ ಸಭೆಗಳಲ್ಲಿ ಬಾಕಿ ಇರುವ ಕಾಮಗಾರಿಗಳು ಪೂರ್ಣಗೊಳಿಸದೆ ಇರುವ ಬಗ್ಗೆ ಅಸಮಧಾನ ವ್ಯಕ್ತಪಡಿಸಿದರು. ಸಹಾಯಕ ಕಾರ್ಯಪಾಲಕ ಅಭಿಯಂತರರು ಕನ್ನಿಂಗ್ ಹ್ಯಾಮ್ ಕ್ರಸೆಂಟ್ ರೋಡ್ ಕಾಮಗಾರಿಗೆ ಸಂಬಂಧಿಸಿದಂತೆ, ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿದ್ದು, ಕಾರ್ಯಾದೇಶ ನೀಡಲಾಗಿರುತ್ತದೆ. ಈಗ ಮಳೆಗಾಲ ಪ್ರಾರಂಭವಾಗಿರುವುದರಿಂದ ಕಾಮಗಾರಿ ಕೈಗೆತ್ತಿಕೊಳ್ಳಲು ಸಾಧ್ಯವಾಗಿರುವುದಿಲ್ಲ ಮಳೆ ಪ್ರಮಾಣ ಕಡಿಮೆಯಾದ ನಂತರ ಡಾಂಬರೀಕರಣ ಕಾಮಗಾರಿ ಪೂರ್ಣಗೊಳಿಸಲಾಗುವುದೆಂದು ಸಮಿತಿ ಸದಸ್ಯರ ಗಮನಕ್ಕೆ ತರಲಾಯಿತು.

ಪ್ರಿಯಾಶೆಟ್ಟಿ ಸಮಿತಿ ಸದಸ್ಯರು ಮಾತಾನಾಡುತ್ತಾ, ಕುಮಾರ ಪಾರ್ಕ್ ವೆಸ್ಟ್, ಸ್ಮಾರ್ಟಸಿಟಿ ವರ್ಕ್, ಶೇಷಾದ್ರಿ ಪುರಂ ಮುಖ್ಯರಸ್ತೆ, ಸ್ವಸ್ತಿಕ್ ರೋಡ್, ಹಾಳಾಗಿದ್ದು, ಸರಿಪಡಿಸಲು ತಿಳಿಸಿದರು ಅಣ್ಣಯ್ಯಪ್ಪ ಬ್ಲಾಕ್, 6ನೇ ಕ್ರಾಸ್‌ನಲ್ಲಿ ಕಾನೂನು ಬಾಹಿರವಾಗಿ ರಸ್ತೆಯನ್ನು ಒತ್ತುವರಿ ಮಾಡಲಾಗಿದೆ ಆದ್ದರಿಂದ, ತಕ್ಷಣ ಒತ್ತುವರಿಯನ್ನು ತೆರವುಗೊಳಿಸಲು ಸೂಚಿಸಿದರು. ಅಲ್ಲದೆ ಬೀದಿ ಬದಿ ವ್ಯಾಪಾರಿಗಳು ಇತ್ತೀಚೆಗೆ ಪಾದಚಾರಿ ಮಾರ್ಗದಲ್ಲಿ ಅಕ್ರಮವಾಗಿ ಟಾರ್ಪಲಿನ್ ಹಾಕಿಕೊಂಡು ವ್ಯಾಪಾರ ನಡಸುತ್ತಿದ್ದು, ಇದರಿಂದ ಪಾದಚಾರಿಗಳಿಗೆ ಓಡಾಡಲು ತುಂಬಾ ತೊಂದರೆಯಾಗುತ್ತಿರುತ್ತದೆ. ಅದಪ್ರಯುಕ್ತ ರೇಣುಕಾಂಬ ಹಿರಿಯ ಆರೋಗ್ಯಾಧಿಕಾರಿ ಇವರು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಸದರಿ ಅಂಗಡಿಗಳನ್ನು ತೆರವುಗೊಳಿಸಲು ಸೂಚಿಸಿದರು ಹಾಗೂ ವಾರ್ಡ್‌ನ ಹಲವು ಕಡೆಗಳಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸಲಾಗಿರುತ್ತದೆ. ಅವುಗಳು ಸರಿಯಾಗಿ ಕೆಲಸ ಮಾಡುತ್ತಿವೆಯೋ ಇಲ್ಲವೇ ಎಂಬುದನ್ನು ಪರಿಶೀಲಿಸಿ ತಿಳಿಸುವಂತೆ ಕೋರಿದರು ಈ ಬಗ್ಗೆ ಶ್ರೀಮತಿ ರೇಣುಕಾಂಬ ಹಿರಿಯ ಆರೋಗ್ಯ ನಿರೀಕ್ಷಕರು, ರವರು ಬ್ಲಾಕ್ ಸ್ಪಾಟ್‌ಗಳ ಬಗ್ಗೆ ಮನೋಜ್ ಕಿರಿಯ ಆರೋಗ್ಯಾಧಿಕಾರಿ ಇವರ ಹತ್ತಿರ ಮಾಹಿತಿ ಇರುವುದಾಗಿ ತಿಳಿಸಿದರು ಮತ್ತು ಡಾರ್ಕ್‌ಸ್ಪಾಟ್ ಸ್ಟ್ರೀಟ್ ಲೈಟ್‌ಗಳ ಬಗ್ಗೆ ಸರಿಯಾದ ಮಾಹಿತಿ ಸಭೆಗೆ ದೊರೆಯುತ್ತಿಲ್ಲ ಆದ್ದರಿಂದ ಮುಂದಿನ ಸಭೆಗೆ ಸಂದೀಪ್ ರವರು ಕಡ್ಡಾಯವಾಗಿ ಹಾಜರಾಗುವಂತೆ ಕ್ರಮ ಕೈಗೊಳ್ಳಲು ನೊಡಲ್ ಅಧಿಕಾರಿಗಳಿಗೆ ತಿಳಿಸಿದರು. ಮುಂದುವರಿದು ರೈಲ್ವೆ ಲೈನ್‌ನಲ್ಲಿ 7 ಲೈಟ್ಸ್, ಸೆಂಟರ್ ಸ್ಟ್ರೀಟ್‌ನಲ್ಲಿ 5 ಲೈಟ್ಸ್ ಕಾರ್ಯ ನಿರ್ವಹಿಸುತ್ತಿಲ್ಲ ಈ ಬಗ್ಗೆ ತಕ್ಷಣ ಗಮನಹರಿಸುವಂತೆ ಸಂದೀಪ್ ಇವರಿಗೆ ತಿಳಿಸಲು ಕೋರಿದರು.

ಮಾಧವನ್ ಹಾಗೂ ಲಕ್ಷ್ಮಣ್ ರವರು ವಸಂತನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಾರ್ವಜನಿಕರಿಗೆ ವ್ಯಾಕ್ಸಿನೇಷನ್ ನೀಡದೆ ಬೇರೆಯವರಿಗೆ ಮಾರಾಟ ಮಾಡುವ ದಂಧೆ ನಡೆಸುತ್ತಿದ್ದಾರೆ ಸಾರ್ವಜನಿಕರಿಗೆ ಸರಿಯಾದ ಮಾಹಿತಿ ನೀಡದೆ ದುರ್ವರ್ತನೆಯಿಂದ ನಡೆದುಕೊಳ್ಳುತ್ತಿರುವುದು ಸಾರ್ವಜನಿಕರಿಗೆ ಮಾನಸಿಕವಾಗಿ ತೊಂದರೆಯಾಗುತ್ತಿದೆ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಲು ಸೂಚಿಸಿದರು ಹಾಗೂ ಒಬ್ಬ ಸರ್ಕಾರಿ ನೌಕರರ ಸುಮಾರು 10 ವರ್ಷಗಳಿಂದ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸರ್ವಾಧಿಕಾರಿ ದೋರಣೆ (ಹೊಂದಿರುವ) ತೋರುತ್ತಿರುವ ಪ್ರಯುಕ್ತ ಸದರಿ ನೌಕರರನ್ನು ವರ್ಗಾವಣೆಗೊಳಿಸುವಂತೆ ಸೂಚಿಸಿದರು. ವಸಂತನಗರ ವಾರ್ಡ್‌ನಲ್ಲಿ ಒಳಚರಂಡಿ ವ್ಯವಸ್ಥೆ, ನೀರಿನ ವ್ಯವಸ್ಥೆ, ಹಾಳಾಗಿರುವ ರಸ್ತೆಗಳು ತುಂಬಾ ಇರುತ್ತವೆ ಈ ಬಗ್ಗೆ ಜಯರಾಜ್, ವರ್ಕ್ ಇನ್ಸ್‌ಪೆಕ್ಟರ್ ಗಮನಹರಿಸಿರುವುದಿಲ್ಲ ಹಾಗೂ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರುವುದಿಲ್ಲ ಆದ್ದರಿಂದ ವರ್ಕ್ ಇನ್ಸ್‌ಪೆಕ್ಟರ್ ಪ್ರತಿದಿನ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಸಮಸ್ಯೆಗಳನ್ನು ಬಗೆಹರಿಸಲು ಕ್ರಮಕೈಗೊಳ್ಳುವಂತೆ ಮಾರ್ಗದರ್ಶನ ನೀಡುವುದು ಹಾಗೂ ಅಣ್ಣಯ್ಯಪ್ಪ ಪಾರ್ಕ್ 3ನೇ ಕ್ರಾಸ್ ವ್ಯಾಪ್ತಿಯಲ್ಲಿ ಅಕ್ರಮವಾಗಿ ನಿರ್ಮಿಸುತ್ತಿರುವ ಕಟ್ಟಡವನ್ನು ತೆರವುಗೊಳಿಸಲು ಸೂಚಿಸಿದರು ಅಲ್ಲದೆ ಅಯ್ಯಪ್ಪಸ್ವಾಮಿ ದೇವಸ್ತಾನ ಹಿಂಬಾಗದ ಶೆಡ್ ಸಹ ತೆಗೆಸಲು ಕೋರಿದರು.

ಚಿತ್ರಾ ವೆಂಕಟೇಶ್, ಸಮಿತಿ ಸದಸ್ಯರು ಮಾತಾನಾಡುತ್ತಾ, ಆನೆ ಪಾರ್ಕ್ ಸುತ್ತಾಮುತ್ತಾ ರಸ್ತೆ ಡಾಂಬರೀಕರಣ ಕಾಮಗಾರಿ ನಡೆಸಬೇಕು ಪಾರ್ಟ್ ಹೋಲ್ಸ್ ಇರುವ ಸ್ಥಳಗಳಲ್ಲಿ ದುರಸ್ತಿ ಕಾರ್ಯ ಕೈಗೊಳ್ಳಬೇಕು L.E.D ಲೈಟ್‌ಗೆ ಸಂಬಂಧಿಸಿದಂತೆ ಸೈಫುಲ್ಲಾ ಕಾಂಟ್ರಾಕ್ಟರ್ ಸರಿಯಾಗಿ ಕೆಲಸ ನಿರ್ವಹಿಸುತ್ತಿರುತ್ತಾರೆ. ಆದರೆ, ಸಂದೀಪ್ ರವರು ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲವೆಂದು ಅಸಮಾದಾನ ವ್ಯಕ್ತಪಡಿಸಿದರು. ರೈಲ್ವೆ ಪ್ಯಾರಲ್ ರಸ್ತೆಗೆ ಸಿ.ಸಿ. ಕ್ಯಾಮರಾ ಅಳವಡಿಸಲು ಕೋರಿದರು. ಪಾರ್ಕ್ ಸುತ್ತಾ ಪಾದಚಾರಿ ಮಾರ್ಗ ದುರಸ್ತಿಗೊಳಿಸಲು ತಿಳಿಸಿದರು. ಸಫಾಯಿ ಕರ್ಮಾಚಾರಿಗಳಿಗೆ (ಪಿ.ಕೆ) ವ್ಯಾಕ್ಸಿನೇಷನ್ ಹಾಕುವ ಕಾರ್ಯ ಸಮರ್ಪವಾಗಿ ಆಗಿಲ್ಲ ಕೆಲವು ಕಡೆ ಸುಮಾರು ಜನರಿಗೆ ವ್ಯಾಕ್ಸಿನೇಷನ್ ಆಗಿಲ್ಲ. ಈ ಬಗ್ಗೆ ಮನೋಜ್ ಕಿರಿಯ ಆರೋಗ್ಯಾಧಿಕಾರಿ ಮಾತಾನಾಡುತ್ತಾ, ಈಗಾಗಲೇ ಪ್ರತಿದಿನ 10 ಜನರ ತಂಡ ಮಾಡಿ ವ್ಯಾಕ್ಸಿನ್ ಹಾಕಿಸಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ ಮುಂದಿನ ಸಭೆಯ ವೇಳೆಗೆ ಎಲ್ಲಾ ಪೌರಕಾರ್ಮಿಕರಿಗೂ ವ್ಯಾಕ್ಸಿನೇಷನ್ ಹಾಕಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಶ್ರೀ ಕುಮಾರ್., ನಾಗರೀಕರು ಮಾತಾನಾಡುತ್ತಾ ಈ ಹಿಂದಿನ ಸಭೆಯಲ್ಲಿ 1ನೇ ಮೈನ್, ಶೇಷಾದ್ರಿಪುರಂ ರಸ್ತೆಯ ನವೀಕರಣ ಕಾಮಗಾರಿ ಪೂರ್ಣಗೊಳ್ಳುವವರಗೆ ಜನರಿಗೆ ಓಡಾಡಲು ತುಂಬಾ ತೊಂದರೆಯಾಗುತ್ತಿರುವುದಾಗಿ ಸದರಿ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕೋರಲಾಗಿತ್ತು. ಆದರೆ, ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿದೆ. ಪ್ರಯುಕ್ತ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಕೋರಿದರು. ಅಲ್ಲದೆ ಕುಮಾರ ಪಾರ್ಕ್ ವೆಸ್ಟ್‌ಗೆ ಸಂಬಂಧಿಸಿದ ಕೆಲವು ಸಾರ್ವಜನಿಕರಿಗೆ 'ಎ' ಗ್ರೇಡ್ ನೋಟಿಸನ್ನು ರೆವಿನ್ಯೂ ಇಲಾಖೆಯವರು ನೀಡುತ್ತಿರುತ್ತಾರೆ ಇದರಿಂದ ಸಾರ್ವಜನಿಕರಿಗೆ ಹೆಚ್ಚುವರಿ ಹಣವನ್ನು ಸಂದಾಯ ಮಾಡಲು ಸಾದ್ಯವಾಗುತ್ತಿರುವುದಿಲ್ಲ ಅದರಿಂದ ಹಿಂದಿನ ಮಾದರಿಯಲ್ಲಿಯೇ ಕಂದಾಯ ಸಂದಾಯ ಮಾಡಲು ಅನುಕೂಲ ಮಾಡಿಕೊಡುವಂತೆ ಕೋರಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮೂರ್ತಿ, ಕಂದಾಯ ವಸೂಲಿಗಾರರು ಮಾತಾನಾಡಿ ಸರ್ಕಾರದ ಆದೇಶದಂತೆ ನಾವು ಕ್ರಮ ವಹಿಸುತ್ತಿದ್ದೇವೆ ಪ್ರಯುಕ್ತ ಸಾರ್ವಜನಿಕರು ಸಹಕರಿಸಬೇಕಾಗಿ ಸಭೆಗೆ ತಿಳಿಸಿದರು.

ಅದರಂತೆ, ಕೆಲವೊಂದು ಇಲಾಖೆಯವರು ಪ್ರತಿ ಸಭೆಗೆ ಹಾಜರಾಗದೆ ಇರುವುದರಿಂದ, ಸಮಿತಿ ಸದಸ್ಯರು ಕೇಳುವ ಪ್ರಶ್ನಗಳಿಗೆ ಉತ್ತರಿಸಲು ಸಾದ್ಯವಾಗುವುದಿಲ್ಲ ಆದಕಾರಣ ಸಂಬಂಧಪಟ್ಟ ಇಲಾಖೆಯವರಿಗೆ ನೋಟೀಸ್ ನೀಡಲು ಶ್ರೀ.ರಾಜಶೇಖರ್, ಕಾರ್ಯದರ್ಶಿ ರವರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು ಹಾಗೂ ಬಾಕಿ ಇರುವ ಕಾಮಗಾರಿಗಳನ್ನು ತುರ್ತಾಗಿ ಇತ್ಯರ್ಥಪಡಿಸುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ತಿಳಿಸುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

R. Manjunatha

ನೋಡಲ್ ಅಧಿಕಾರಿಗಳು
ವಾರ್ಡ್- 93, ವಸಂತನಗರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಸದಸ್ಯ ಕಾರ್ಯದರ್ಶಿಗಳು
ವಾರ್ಡ್- 93, ವಸಂತನಗರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:-

1. ಮಾನ್ಯ ಆಡಳಿತಗಾರರು ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು(ಪೂರ್ವ ವಲಯ) ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಜಂಟಿ ಆಯುಕ್ತರು (ಪೂರ್ವ ವಲಯ) ಅವಗಾಹನೆಗೆ ಸಲ್ಲಿಸಿದೆ.
5. ಕಛೇರಿ ಕಡತಕ್ಕೆ.